

# ದಿಗಂತ್‌ಗೆ ಇದು ಬದಲಾವಣೆಯ ಸಮಯ!

ಆಸೆ ಇತ್ತು. ನನಗೂ ಗಣೇಶ್‌ಗೂ ಅದೇ ಆಸೆ ಇತ್ತು. ಹಾಗಾಗಿ ಇದು ಒಂದು ಸರಿಯಾದ ಸಿನಿಮಾ. ನಮ್ಮೆಲ್ಲರಿಗೂ ಯಶಸ್ಸು ಕೊಡುತ್ತದೆ ಎಂದು ನಂಬಿದ್ದೀನಿ.

**◆ ನೀವು ಐಂದ್ರಿತಾ ಮದುವೆಯಾದ ಮೇಲೆ ಬದುಕು ಬದಲಾಗಿದೆ ಅನಿಸ್ತಿದ್ಯಾ?**

ನಾವು ಮದುವೆಗೂ ಮೊದಲಿನಿಂದಲೂ ಪ್ರೇಮಿಸುತ್ತಿದ್ದೆವು. ಮದುವೆ ಆಗಿದೀವಿ ಅನ್ನೋ ಕಾರಣಕ್ಕೇ ನಮ್ಮ ಬದುಕಲ್ಲಿ ಏನೂ ಬದಲಾಗಿಲ್ಲ. ಮೊದಲಿದ್ದ ಹಾಗೆಯೇ ಇದ್ದೇವೆ. ಖುಷಿ ಖುಷಿಯಾಗಿ, ನಕ್ಕೊಂಡು, ಸೈಕ್ಲಿಂಗ್ ಮಾಡ್ಕೊಂಡು, ಟ್ರೆಕ್ಕಿಂಗ್ ಮಾಡ್ಕೊಂಡು ಆರಾಮವಾಗಿದೀವಿ. ನಮ್ಮಿಬ್ಬರಿಗೂ ಟ್ರಾವೆಲಿಂಗ್, ಔಟ್ ಡೋರ್ ಚಟುವಟಿಕೆಗಳೆಲ್ಲ ತುಂಬ ಇಷ್ಟ. ಅವನ್ನೆಲ್ಲ ಮಾಡಿಕೊಂಡಿದೀವಿ.

**◆ ಈಗ ನಿಮ್ಮ ನಟನಾಪ್ರಯಾಣ ಒಂದು ತಿರುವಿನ ಹಂತದಲ್ಲಿದೆ ಅಲ್ಲವೇ?**

ಖಂಡಿತ. ಕಳೆದ ವರ್ಷ ನನ್ನ 'ಫಾರ್ಚುನರ್' ಎಂಬ ಒಂದು ಸಿನಿಮಾ ಮಾತ್ರ ಬಿಡುಗಡೆಯಾಗಿತ್ತು. ಅದಕ್ಕೂ ಹಿಂದಿನ ವರ್ಷ 'ಕಥೆಯೊಂದು ಶುರುವಾಗಿದೆ' ಎಂಬ ಸಿನಿಮಾ ಮಾತ್ರ ಬಿಡುಗಡೆಯಾಗಿತ್ತು. ಕಥೆಯೊಂದು... ಸಿನಿಮಾ ಮಾಡಿದಾಗ ಅದುವರೆಗೆ ನನ್ನ ಆ ರೀತಿಯ ಪಾತ್ರದಲ್ಲಿ ನೋಡಿರಲಿಲ್ಲ. ಅದರಲ್ಲಿ ನಾನು ನ್ಯಾಚುರಲ್ ಆಗಿ ನಟಿಸಿರುವುದು ತುಂಬ ಜನರಿಗೆ ಇಷ್ಟವಾಗಿತ್ತು. ಈಗಲೂ ಅಮೆಜಾನ್ ಪ್ರೈಮ್‌ನಲ್ಲಿ ರಿವ್ಯೂ ನೋಡಿದರೆ ಗೊತ್ತಾಗುತ್ತೆ. ನನಗೆ ಆಗಲೇ ಇದು ನನ್ನ ನಟನಾಜೀವನದಲ್ಲಿ ಶಿಫ್ಟ್‌ಗೆ ಸರಿಯಾದ ಸಮಯ ಅನಿಸಿತ್ತು. ಪ್ರಬುದ್ಧ ಪಾತ್ರಗಳನ್ನು ಆಯ್ಕೆ ಮಾಡಿಕೊಳ್ಳಬೇಕು ಅನಿಸಿತ್ತು. ಜನರೂ ಅದನ್ನು ಬಯಸಿದ್ದಾರೆ ಅನಿಸುತ್ತದೆ. ಈಗ ರಿಯಲಿಸ್ಟಿಕ್ ಪಾತ್ರಗಳಲ್ಲಿ ಅಭಿನಯಿಸೋಕೆ ಇಷ್ಟಪಡ್ತಿದೀನಿ. ಇನ್ನೂ ಹೆಸರಿಡದ ಇನ್ನೊಂದು ಸಿನಿಮಾವನ್ನು ಒಪ್ಪಿಕೊಂಡಿದ್ದೇನೆ. ಶ್ರೀನಿವಾಸ್ ಎಂಬ ಹೊಸ ನಿರ್ದೇಶಕರ ಸಿನಿಮಾ ಅದು. ಕಿಶೋರ್ ಮತ್ತೆ ನಾನು ನಟಿಸುತ್ತಿದ್ದೇವೆ. ನಾನು ಸೈಕ್ಲಿಂಗ್ ಮಾಡ್ತೀನಿ, ಟ್ರೆಕ್ ಮಾಡ್ತೀನಿ, ವಾಲ್ ಫ್ಲಿಪ್, ಬ್ಯಾಕ್ ಫ್ಲಿಪ್ ಎಲ್ಲ ಮಾಡ್ತೀನಿ. ಅದನ್ನು ನೋಡಿಯೇ ಶ್ರೀನಿವಾಸ ಅವರು ನನ್ನ ಮನಸಲ್ಲಿಟ್ಟುಕೊಂಡು ಕಥೆ ಮಾಡಿದ್ದಾರೆ. ತುಂಬ ಚೆನ್ನಾಗಿದೆ. ಅದನ್ನು ಜನವರಿ 15ರ ನಂತರ ಚಿತ್ರೀಕರಣ ಮಾಡುತ್ತಿದ್ದಾರೆ. ಮೊದಲು ಬರೆದಿರುವ ಕಥೆಗೆ ನನ್ನನ್ನು ಫಿಟ್ ಮಾಡಿಕೊಳ್ಳಬೇಕಾಗಿತ್ತು. ಈಗ ನನ್ನ ಮನಸಲ್ಲಿಟ್ಟುಕೊಂಡು ಕಥೆ ಬರೆಯುತ್ತಿದ್ದಾರೆ. ಅದು ನನ್ನ ಮಟ್ಟಿಗೆ ಒಳ್ಳೆಯ ಸೂಚನೆ.

**◆ ಕನ್ನಡದ ಪ್ರೇಕ್ಷಕರು ಡಿಜಿಟಲ್ ವೇದಿಕೆಗಳಿಗೆ ಶಿಫ್ಟ್ ಆಗುತ್ತಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ. ನಿಮಗೇನನಿಸುತ್ತದೆ?**

ಒಟಿಟಿಯೇ ಭವಿಷ್ಯದ ವೇದಿಕೆ ಎಂದು ನನಗೆ ಬಲವಾಗಿ ಅನಿಸುತ್ತಿದೆ. ಆದರೆ ಕೆಲವು ಸಿನಿಮಾಗಳನ್ನು ನಾವು ಚಿತ್ರಮಂದಿರಗಳಿಗೆ ಹೋಗಿಯೇ ನೋಡಬೇಕು. ತ್ರೀ ಡಿ ಸಿನಿಮಾಗಳು, ದೊಡ್ಡ ಮಟ್ಟದ ಆ್ಯಕ್ಷನ್ ಸಿನಿಮಾಗಳನ್ನೆಲ್ಲ ಒಟಿಟಿ ಫ್ಲಾಟ್‌ಪಾರಂ ಎಷ್ಟೇ ಬೆಳೆದರೂ ಜನರು ಅಲ್ಲಿ ನೋಡಲು ಇಷ್ಟಪಡುವುದಿಲ್ಲ. ಚಿತ್ರಮಂದಿರಗಳಲ್ಲಿಯೇ ನೋಡಲು ಬಯಸುತ್ತಾರೆ. ಅಂಥ ಸಿನಿಮಾಗಳಿಗೆ ಚಿತ್ರಮಂದಿರಗಳಲ್ಲಿ ಒಳ್ಳೆಯ ಬೇಡಿಕೆ ಇದ್ದೇ ಇರುತ್ತದೆ. ಚಿತ್ರಮಂದಿರಗಳು ನಾಶವಾಗುವುದಿಲ್ಲ. ಆದರೆ ಒಟಿಟಿಯಂತೂ ಸಾಕಷ್ಟು ಬೆಳೆಯುತ್ತದೆ. ಮಲಯಾಳಂನ ಫಹಾದ್ ಪಾಸಿಲ್ ಅವರ ಒಂದು ಸಿನಿಮಾ ಲಾಕ್‌ಡೌನ್‌ನಲ್ಲಿ ಮೊಬೈಲ್‌ನಲ್ಲಿ ಸಿನಿಮಾ ಮಾಡಿ ಒಟಿಟಿಯಲ್ಲಿ ಬಿಡುಗಡೆ ಮಾಡಿದ್ದಾರೆ. ಅದು ಆ ವೇದಿಕೆಯ ಶಕ್ತಿ. ನನ್ನ ಹೆಚ್ಚಿನ ಸಿನಿಮಾಗಳು ಒಟಿಟಿಯಲ್ಲಿ ಬಿಡುಗಡೆಯಾಗಬಹುದು. ಅದರ ಬಗ್ಗೆ ನನಗೆ ಏನೂ ಬೇಜಾರಿಲ್ಲ. ಯಾಕೆಂದರೆ ಒಂದೇ ಸಲಕ್ಕೆ ಇಡೀ ಜಗತ್ತಿನ ಎಲ್ಲೆಡೆ ನೋಡಲು ಸಿಗುವುದು ಸಣ್ಣ ವಿಷಯವಲ್ಲ. ಒಟಿಟಿಯಲ್ಲಾಗಲಿ, ಚಿತ್ರಮಂದಿರದಲ್ಲಾಗಲಿ ನನಗೆ ಯಾವ ವ್ಯತ್ಯಾಸವೂ ಇಲ್ಲ. ನನ್ನ ಪ್ರಕಾರ ಒಟಿಟಿಯೇ ಫ್ಯೂಚರ್ ಅನಿಸುತ್ತದೆ.